ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಸಿರಿಗೆರೆ.

# ತರಳಬಾಳು "ಕೃಷಿ ಸಿಂಚನ"

ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ.

ದೂರವಾಣಿ : 08192-294568 | ತ್ರೈಮಾಸಿಕ ಪತ್ರಿಕೆ | ಮಿಂಚಂಚೆ : tkvk@taralabalu.org

ಏಪ್ರಿಲ್-ಜೂನ್ 2008 | (Quarterly News Letter) | ಸಂಪುಟ: 1. ಸಂಚಿಕೆ : 3

## ಮಾರ್ಗದರ್ಶನ ಮತ್ತು ಪ್ರೋತ್ಸಾಹ

**ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ,** ಉಪಾಧ್ಯಕ್ಷರು, ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಸಿರಿಗೆರೆ ರವರು ಕೃಷಿ ವಿಜ್ಞಾನ ಕೇಂದ್ರಕ್ಕೆ ನೀಡಿದ ಭೇಟಿ ಬಹಳ ವಿಶೇಷವಾಗಿತ್ತು. ಪೂಜ್ಯರು ನೀಡಿದ ಮಾರ್ಗದರ್ಶನ ಮತ್ತು ಪ್ರೋತ್ಸಾಹ ಕೃಷಿ ವಿಜ್ಞಾನ ಕೇಂದ್ರದ ತಂಡದ ಶಕ್ತಿಯನ್ನು ಇಮ್ಮಡಿಗೊಳಿಸಿದೆ.



### ಸಿಂಚನಕ್ಕೆ ಮುನ್ನ........

## "ಕೂಲಿ ಆಳುಗಳು ದೊರಕುತ್ತಿಲ್ಲ, ಹಾಹಾಕಾರ,ಪರವಾಗಿಲ್ಲ, ನಮ್ಮಲ್ಲೇ ಇದೇ ಪರಿಹಾರ"

ಮುಂಗಾರು ಮಳೆ ಶುರುವಾಗಿದೆ. ಬೀಜ ಬಿತ್ತನೆ ಆಗಬೇಕು. ಗೊಬ್ಬರದ ಸಮಸ್ಯೆ ಒಂದೆಡೆಯಾದರೆ, ಕೂಲಿ ಆಳುಗಳು ದೊರಕದಿರುವುದು ಇನ್ನೊಂದು ಬೃಹತ್ ಸಮಸ್ಯೆ. ನಮ್ಮ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಪ್ರಾತ್ಯಕ್ಷಿಕಾ ತಾಕುಗಳಲ್ಲಿಯೂ ಸನ್ನಿವೇಶ ಹೊರತಾಗಿರಲಿಲ್ಲ. ಏನು ಮಾಡುವುದು ಎಂದು ನಾವು ವಿಜ್ಞಾನಿ ಮಿತ್ರರೆಲ್ಲ ಯೋಚಿಸಿ ಒಂದು ನಿರ್ಧಾರಕ್ಕೆ ಬಂದೆವು. ಕೂಲಿ ಆಳುಗಳು ಎಷ್ಟು ಸಿಗುತ್ತಾರೋ, ಸಿಗಲಿ. ಅವರೊಂದಿಗೆ ಸೇರಿ ನಾವು ಕೆಲಸ ಮಾಡೋಣ ಎಂಬುವ ತೀರ್ಮಾನ ಆದಾಗಿತ್ತು. "ಎಂ.ಎಸ್ಸಿ, ಪಿಹೆಚ್‌ಡಿ ಓದಿದ್ದರೇನಾಯ್ತು, ಕೈ ಕೆಸರಾದರೆ ಬಾಯಿ ಮೊಸರು" ಎಂಬ ಹಳೆ ನಾಣ್ನುಡಿ ಪ್ರಸ್ತುತ ಪರಿಸ್ಥಿತಿಯಲ್ಲಿ ಬಹಳ ಅವಶ್ಯಕವಾಗಿದೆ ಎಂಬ ಸತ್ಯವನ್ನು ಎಲ್ಲರೂ ಮನಗಂಡೆವು. ಭಾರತದ ಕೃಷಿ ವಿಜ್ಞಾನ ಕೇಂದ್ರಗಳ 35 ವರ್ಷಗಳ ಇತಿಹಾಸದಲ್ಲಿ ಕಂಡರಿಯದ ರೀತಿಯಲ್ಲಿ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಕೂಲಿ ಆಳುಗಳನ್ನು ಮೀರಿಸುವಂತೆ ಕೆಲಸ ನಿರ್ವಹಿಸಿದರು. ವಿಜ್ಞಾನಿಗಳು ಮತ್ತು ಸಿಬ್ಬಂದಿಗಳು ಕೂಲಿ ಆಳುಗಳೊಂದಿಗೆ ಸೇರಿ ಒಂದೇ ದಿನದಲ್ಲಿ ಮೇವು ಹುಲ್ಲಿನ ಬೀಜದ ಕಡ್ಡಿಗಳನ್ನು ಎರಡು ಎಕರೆ ಪ್ರದೇಶದಲ್ಲಿ ನೆಟ್ಟು ಸೈ ಎನಿಸಿಕೊಂಡರು. ಬರೀ ಕೂಲಿ ಆಳುಗಳೇ ಮಾಡುವುದಾಗಿದ್ದರೆ ಮೂರು ದಿನದ ಕೆಲಸವಾಗುತ್ತಿತ್ತು ಮತ್ತು ಸತತವಾಗಿ ಸುರಿದ ಮಳೆಯಿಂದಾಗಿ ಕೆಲಸವು ಸರಿಯಾದ ಸಮುಯಕ್ಕೆ ಕೈಗೂಡುತ್ತಿರಲಿಲ್ಲ.

ನಂತರ 8 ಎಕರೆ ಮೆಕ್ಕೆಜೋಳ ಬಿತ್ತಿದ್ದು, ಅದಕ್ಕೆ ಮುಂಚೆ 1000 ಅಡಿಕೆ ಸಸಿಗಳನ್ನು ಹಾಕಿದ್ದು, ನಂತರ ವಿವಿಧ ನೂರಾರು ಹಣ್ಣಿನ ಗಿಡಗಳನ್ನು ನೆಟ್ಟಿದ್ದು, ಎರೆಹುಳು ಗೊಬ್ಬರ ತಯಾರಿಕಾ ಘಟಕ ನಿರ್ಮಾಣಕ್ಕೆ ಅಡಿಪಾಯದ ಗುಂಡಿಗಳನ್ನು ತಾವೇ ತೆಗೆದಿದ್ದು, ಹೀಗೆ ಹಲವಾರು ಜಮೀನು ಚಟುವಟಿಕೆಗಳಲ್ಲಿ ಯಾವುದೇ ಹಮ್ಮುಬಿಮ್ಮುಗಳಿಲ್ಲದೆ ಕೃಷಿ ವಿಶ್ವವಿದ್ಯಾನಿಲಯದ ಪದವೀಧರರು ಪಾಲ್ಗೊಂಡಿರುವುದು ಎಂಥವರನ್ನು ಮನಸೂರೆಗೊಳ್ಳುತ್ತದೆ. ಯಾರ/ಯಾವ ಶಹಭಾಷ್‌ಗಿರಿಗಾಗಿ ಈ ಕೆಲಸಗಳನ್ನು ಮಾಡುತ್ತಿಲ್ಲ. ಬದಲಾಗಿ ಆತ್ಮತೃಪ್ತಿಗೆ ಮತ್ತು ವೃತ್ತಿಕ್ಷಮತೆಯನ್ನು ಮೆರೆಯುವುದಕ್ಕಾಗಿ ಮಾಡುತ್ತಿದ್ದೇವೆ ಎಂಬುದು ವಿಜ್ಞಾನಿಗಳ ಅಂತರಾಳ. ಆಯಾ ಬೀಜಗಳನ್ನು ಸೂಕ್ತವಾದ ಸಮಯದಲ್ಲಿ ಬಿತ್ತದಿದ್ದರೆ ವ್ಯರ್ಥ. ಇದನ್ನು ತಿಳಿದೂ ತಾವು ಸರಿಯಾದ ಸಮಯದಲ್ಲಿ ಎಚ್ಚೆತ್ತುಕೊಳ್ಳದಿದ್ದರೆ ರೈತರಿಗೆ ಮಾದರಿಯಾಗಿ ಕೇಂದ್ರವನ್ನು ಬೆಳೆಸುವುದು ಅಸಾಧ್ಯ ಮತ್ತು ಮಾತಿಗಿಂತ ಮಾಡಿ ತೋರಿಸೋಣ ಎಂಬುದು ಅವರ ಮನೋನಿರ್ಧಾರ.

ಸ್ವಲ್ಪ ಓದಿದ್ದೇನೆ ಎಂದಾಕ್ಷಣ ಸಗಣಿ ಮುಟ್ಟಿ, ಕಸಗುಡಿಸುವುದಿಲ್ಲ ಎಂದು ಮೂಗು ಮುರಿಯುವ ಅರೆಬರೆ ವಿದ್ಯಾವಂತ ಯುವಜನಾಂಗದ ಮನೋಭಾವನೆ ಬದಲಾಗಬೇಕಾದ ಅನಿವಾರ್ಯತೆ ನಮ್ಮೆಲ್ಲರ ಮುಂದಿದೆ ಎಂಬುದು ಕಹಿಸತ್ಯ. 'ತುಪ್ಪ ಮೊಸರು ಬೇಕು, ಆದರೆ ಸಗಣಿವಾಸನೆ ಮಾತ್ರ ಬೇಡ' ಎನ್ನುವ ಯುವಜನತೆ ಒಂದು ಕ್ಷಣ ಯೋಚಿಸಬೇಕಾದ ಅಗತ್ಯತೆ ಹಿಂದೆಂದಿಗಿಂತಲೂ ಇಂದು ಹೆಚ್ಚಿದೆ. 'ಎಂಥಹ ಕೃಷಿ ಚಟುವಟಿಕೆಗಳಿಗೂ ನಾವು ಸೈ' ಎನ್ನುವಂತೆ ಕೇಂದ್ರದ ಕೃಷಿ ವಿಜ್ಞಾನಿಗಳು ಕಟಿಬದ್ಧರಾಗಿ ನಿಂತಿರುವುದು ಅಭಿವೃದ್ಧಿಯ ದಾರಿಯನ್ನು ನಿಚ್ಚಳಗೊಳಿಸಿದೆ. ಮುಂಗಾರುಋತು ನಿಧಾನವಾಗಿ ಮೈದೋರುತ್ತಿದೆ. ಸಕಾಲದಲ್ಲಿ ಬೀಜ ಗೊಬ್ಬರಗಳು ರೈತರ ಕೈಸೇರಲಿ ಎಂದು ನಾವೆಲ್ಲರೂ ಆಶಿಸುತ್ತೇವೆ. ಜೊತೆಗೆ ಸುಸ್ಥಿರತೆ ಮತ್ತು ಸಮಗ್ರತೆಯನ್ನು ಬೆರೆಸಿ ವಿಜ್ಞಾನ-ತಂತ್ರಜ್ಞಾನಗಳನ್ನು ಸಮತೋಲಿಸಿ ಬೆಳೆಗಳನ್ನು ಆಯ್ಕೆಮಾಡಿಕೊಳ್ಳುವ ಜಾಣತನ ತೋರಬೇಕಾದ ವಿಪ್ಲವ ಕಾಲ ಇದಾಗಿದೆ. ಸಮೃದ್ಧ ಮುಂಗಾರು ಮಳೆ ಬರಲಿ, ಎಲ್ಲೆಡೆ ರೈತ ಸಂಕುಲಕ್ಕೆ ಹರುಷವ ತರಲಿ ಎಂದು ಹಾರೈಸುತ್ತಾ ಮೂರನೇ ಕೃಷಿ ಸಿಂಚನವನ್ನು ನಿಮ್ಮ ಕೈಯಲ್ಲಿಡುತ್ತಿದ್ದೇವೆ.

ಸಂಪಾದಕರು

## "ಬಲು ಅಪರೂಪ ನೋಡಿ, ನಮ್ಮ ತಂಡದ ಮೋಡಿ"











ದಿನಾಂಕ 05-06-2008 ರಂದು "ವಿಶ್ವ ಪರಿಸರ ದಿನ"ವನ್ನು ವಿಜ್ಞಾನಿಗಳು ಮತ್ತು ಸಿಬ್ಬಂದಿಗಳೆಲ್ಲರೂ ಸೇರಿ ಕೇಂದ್ರದ ಕದಳೀವನದಲ್ಲಿ ಪಾರ್ಥೇನಿಯಂ ಕಳೆಯನ್ನು ನಿರ್ಮೂಲನೆ ಮಾಡುವ ಮೂಲಕ ವಿಶೇಷ ರೀತಿಯಲ್ಲಿ ಆಚರಿಸಿದರು.

## "ಜ್ಞಾನದ ಬಲದಿಂದ ಅಜ್ಞಾನದ ಕೇಡ ನೋಡಯ್ಯ"

### ಗ್ರಾಮಸಭೆಗಳು






ಚನ್ನಗಿರಿ ತಾಲ್ಲೂಕಿನ ಗರಗ, ದಾವಣಗೆರೆ ತಾಲ್ಲೂಕಿನ ಕಂದಗಲ್ಲು, ಹಾಲವರ್ತಿ, ಶ್ಯಾಗಲೆ, ಬುಳ್ಳಾಪುರ ಮತ್ತು ಮಲ್ಲೇನಹಳ್ಳಿ, ಹರಪನಹಳ್ಳಿ ತಾಲ್ಲೂಕಿನ ಬೂದಿಹಾಳ್ ಮತ್ತು ಅಣಜಿಗೆರೆ, ಜಗಳೂರು ತಾಲ್ಲೂಕಿನ ಚಿಕ್ಕಬಂಟನಹಳ್ಳಿ, ಹರಿಹರ ತಾಲ್ಲೂಕಿನ ಕಡರನಾಯಕನಹಳ್ಳಿ ಗ್ರಾಮಗಳಲ್ಲಿ 2008-09ನೇ ಸಾಲಿನ ಕ್ಷೇತ್ರ ಪ್ರಾತ್ಯಕ್ಷಿಕೆ ಮತ್ತು ಕ್ಷೇತ್ರ ಪ್ರಯೋಗಗಳಿಗಾಗಿ ರೈತರನ್ನು ಆಯ್ಕೆ ಮಾಡಲು ಗ್ರಾಮಸಭೆಗಳನ್ನು ನಡೆಸಲಾಯಿತು.

### ಕೃಷಿ ಮಾಹಿತಿ ಶಿಬಿರ



ದಾವಣಗೆರೆ ತಾಲ್ಲೂಕಿನ ಕಂದಗಲ್ಲು ಗ್ರಾಮದಲ್ಲಿ **ದಿನಾಂಕ 12-04-2008** ರಂದು ಒಂದು ದಿನದ ಕೃಷಿ ಮಾಹಿತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಕೇಂದ್ರದ ಕಾರ್ಯಕ್ರಮ ಸಂಯೋಜಕರಾದ ಡಾ. ದೇವರಾಜ ಟಿ.ಎನ್. ಹಾಗೂ ವಿಜ್ಞಾನಿಗಳಾದ ಶ್ರೀ ಬಸವನಗೌಡ ಎಂ.ಜಿ., ಶ್ರೀ ಮಲ್ಲಿಕಾರ್ಜುನ ಬಿ.ಓ., ಡಾ। ಜಯದೇವಪ್ಪ ಜಿ.ಕೆ. ಗ್ರಾಮಸ್ಥರಿಗೆ ಕೃಷಿಯಲ್ಲಿನ ಹೊಸ ತಂತ್ರಜ್ಞಾನಗಳ ಬಗ್ಗೆ ಹಾಗೂ ರೈತರ ಜ್ವಲಂತ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಸೂಕ್ತ ಮಾಹಿತಿಯನ್ನು ನೀಡಿದರು.



ಪ್ರಸ್ತುತ ಮುಂಗಾರಿನಲ್ಲಿ ಹತ್ತಿ ಬೆಳೆಯ ಸಮಗ್ರ ನಿರ್ವಹಣೆಯಲ್ಲಿ 'ರೈತಕ್ಷೇತ್ರಪಾಠಶಾಲೆ'ಯನ್ನು ಬೂದಿಹಾಳ್ ರೈತರಿಗೆ ಪ್ರಾರಂಭಿಸಲಾಗಿದೆ.



ರೈತ ಮಹಿಳಾ ಸ್ವ-ಸಹಾಯ ಸಂಘದ ಮಹಿಳೆಯರೊಂದಿಗೆ ಗುಂಪು ಚರ್ಚೆಯಲ್ಲಿ ಗೃಹ ವಿಜ್ಞಾನಿ

**"ಮೀನಿದ್ದರೆ ಕೊಳದಲ್ಲಿ**



**ಹಣ ಇಟ್ಟಂಗೆ ಬ್ಯಾಂಕಲ್ಲಿ"**

### ಸಂಪನ್ಮೂಲ ವ್ಯಕ್ತಿಗಳಾಗಿ ಕೇಂದ್ರದ ವಿಜ್ಞಾನಿಗಳು



ದಿನಾಂಕ 24ನೇ ಏಪ್ರಿಲ್, 2008 ರಂದು ಬೋರಗೊಂಡನಹಳ್ಳಿಯಲ್ಲಿ ಸಮಾಜಕಾರ್ಯ ವಿಭಾಗ, ಸ್ನಾತಕೋತ್ತರ ಅಧ್ಯಯನ ಕೇಂದ್ರ, ದಾವಣಗೆರೆ ಕುವೆಂಪು ವಿಶ್ವವಿದ್ಯಾನಿಲಯದವರು ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆ ಶಿಬಿರದಲ್ಲಿ ಕೇಂದ್ರದ ತೋಟಗಾರಿಕೆ ತಜ್ಞ **ಶ್ರೀ ಬಸವನಗೌಡ ಎಂ.ಜಿ.** **"ಕೃಷಿಯಲ್ಲಿ ಹೊಸ ತಾಂತ್ರಿಕತೆಗಳು"** ಎಂಬ ವಿಷಯದಲ್ಲಿ ಅತಿಥಿ ಉಪನ್ಯಾಸ ನೀಡಿದರು.



ಮೇ 30, 2008 ರಂದು ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯದ B.Ed ವಿದ್ಯಾರ್ಥಿಗಳಿಗೆ ಶಾಂತಿವನ, ಸಿರಿಗೆರೆಯಲ್ಲಿ **"ಮಳೆನೀರು ಕೊಯ್ಲು ಮತ್ತು ಕೃಷಿಯಲ್ಲಿ ಅದರ ಮಹತ್ವ"** ಕುರಿತು ಬೇಸಾಯ ತಜ್ಞರಾದ **ಶ್ರೀ ಮಲ್ಲಿಕಾರ್ಜುನ ಬಿ.ಓ.** ಉಪನ್ಯಾಸ ನೀಡಿದರು.



ದಿನಾಂಕ 02-06-2008 ರಂದು ಜಗಳೂರು ತಾಲ್ಲೂಕು ಮಲ್ಲಾಪುರ ಗ್ರಾಮದಲ್ಲಿ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯವರು ಏರ್ಪಡಿಸಿದ್ದ **"ಈರುಳ್ಳಿ ಬೆಳೆಯ ಆಧುನಿಕ ಬೇಸಾಯ ಕ್ರಮಗಳು"** ವಿಚಾರ ಸಂಕೀರಣದಲ್ಲಿ ಕೇಂದ್ರದ ತೋಟಗಾರಿಕೆ ತಜ್ಞ **ಶ್ರೀ ಬಸವನಗೌಡ ಎಂ.ಜಿ.** ಸಂಪನ್ಮೂಲ ವ್ಯಕ್ತಿಗಳಾಗಿ ಉಪನ್ಯಾಸ ನೀಡಿದರು.

### ಕೇಂದ್ರದ ವಿಜ್ಞಾನಿಗಳು ಭಾಗವಹಿಸಿದ ಕಾರ್ಯಾಗಾರಗಳು/ಕಮ್ಮಟಗಳು/ವಿಚಾರ ಸಂಕಿರಣಗಳು/ತರಬೇತಿಗಳು

- ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನಲ್ಲಿ ದಿನಾಂಕ 4 ಮತ್ತು 5ನೇ ಏಪ್ರಿಲ್, 2008 ರಂದು ನಡೆದ ಹತ್ತಿ ಬೆಳೆಯ ವಿಮರ್ಶೆ ಮತ್ತು 2008-09ನೇ ಸಾಲಿನ ಕಾರ್ಯಸೂಚಿ ಸಭೆಯಲ್ಲಿ ಕೇಂದ್ರವು ಕಳೆದ ವರ್ಷದಲ್ಲಿ ಹಮ್ಮಿಕೊಂಡಿದ್ದ ಹತ್ತಿ ಬೆಳೆಯ ಕಾರ್ಯ ಚಟುವಟಿಕೆಗಳನ್ನು ಹಾಗೂ ಮುಂದಿನ ವರ್ಷದ ಕ್ರಿಯಾ ಯೋಜನೆಯನ್ನು ಕೇಂದ್ರದ ಬೇಸಾಯ ತಜ್ಞ ಶ್ರೀ ಮಲ್ಲಿಕಾರ್ಜುನ ಬಿ.ಓ. ರವರು ಮಂಡಿಸಿದರು. 2008-09ನೇ ಸಾಲಿನಲ್ಲಿ 50 ಎಕರೆ ಪ್ರದೇಶದಲ್ಲಿ ಹತ್ತಿ ಬೆಳೆಯ ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಳ್ಳಲಾಗಿದೆ.

☛ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ವಿಸ್ತರಣಾ ನಿರ್ದೇಶನಾಲಯದಲ್ಲಿ ದಿನಾಂಕ 2 ಮತ್ತು 3ನೇ ಮೇ, 2008 ರಂದು ನಡೆದ 2008-09ನೇ ಸಾಲಿನ ಕಾರ್ಯಸೂಚಿ ಸಭೆಯ ಮುಂದಿನ ವರ್ಷದ ಕ್ರಿಯಾ ಯೋಜನೆಯನ್ನು ಕೇಂದ್ರದ ಮುಖ್ಯಸ್ಥರಾದ ಡಾ. ದೇವರಾಜ ಟಿ.ಎನ್. ರವರು ಇತರೆ ವಿಜ್ಞಾನಿಗಳೊಂದಿಗೆ (ಶ್ರೀ ಬಸವನಗೌಡ ಎಂ.ಜಿ., ಶ್ರೀ ಮಲ್ಲಿಕಾರ್ಜುನ ಬಿ.ಓ. ಮತ್ತು ಡಾ। ಜಯದೇವಪ್ಪ ಜಿ.ಕೆ.) ಮಂಡಿಸಿದರು.

☛ ಕುಮಾರಿ ಕವಿತಾ ಪಿ. ಇವರು 8 ರಿಂದ 12ನೇ ಏಪ್ರಿಲ್, 2008 ರವರೆಗೆ ಬೇಕರಿ ತರಬೇತಿ ಕೇಂದ್ರ, ಕೃಷಿ ವಿಶ್ವವಿದ್ಯಾನಿಲಯ, ವಿಸ್ತರಣಾ ನಿರ್ದೇಶನಾಲಯ, ಬೆಂಗಳೂರಿನಲ್ಲಿ ನಡೆದ 'ಬೇಕರಿ ಮತ್ತು ಆಹಾರ ಸಂರಕ್ಷಣೆ' ತರಬೇತಿಯಲ್ಲಿ ಭಾಗವಹಿಸಿದ್ದರು.

☛ ಶ್ರೀ ಮಲ್ಲಿಕಾರ್ಜುನ ಬಿ.ಓ. ರವರು 21 ರಿಂದ 26ನೇ ಏಪ್ರಿಲ್, 2008 ರವರೆಗೆ ಕೃಷಿ ವಿಶ್ವವಿದ್ಯಾನಿಲಯ, ವಿಸ್ತರಣಾ ಕ್ಷೇತ್ರ ನಿರ್ದೇಶನಾಲಯ, ಬೆಂಗಳೂರಿನಲ್ಲಿ ನಡೆದ 'ರೈತಕ್ಷೇತ್ರಪಾಠಶಾಲೆ' ತರಬೇತಿಯಲ್ಲಿ ಭಾಗವಹಿಸಿರುತ್ತಾರೆ.

☛ ದಿನಾಂಕ 11ನೇ ಏಪ್ರಿಲ್, 2008 ರಂದು Foundation for Revitalization of Local Health Traditions (FRLHT), ಬೆಂಗಳೂರಿನಲ್ಲಿ ನಡೆದ 15ನೇ ವಾರ್ಷಿಕ ಮಹಾಸಭೆಯಲ್ಲಿ ಕೇಂದ್ರದ ತೋಟಗಾರಿಕೆ ತಜ್ಞ ಶ್ರೀ ಬಸವನಗೌಡ ಎಂ.ಜಿ. ರವರು ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಪ್ರತಿನಿಧಿಯಾಗಿ ಭಾಗವಹಿಸಿದ್ದರು.

☛ ಜೂನ್ 20, 2008 ರಂದು ಕೃಷಿ ವಿಶ್ವವಿದ್ಯಾನಿಲಯದಲ್ಲಿ ನಡೆದ **"ISRO-UAS (B) - Village Resource Centres networking in Karnataka"** ತರಬೇತಿಯಲ್ಲಿ ಕೇಂದ್ರದ ಕವಿತಾ ಪಿ. ಮತ್ತು ಡಾ. ಜಯದೇವಪ್ಪನವರು ಭಾಗವಹಿಸಿದ್ದರು. ನಮ್ಮ ಕೇಂದ್ರದಲ್ಲಿ ಸ್ಥಾಪಿಸಲಾಗಿರುವ Satellite Video Conference Studio ಕ್ರಿಯಾಶೀಲವಾಗಿದ್ದು, ರೈತರು ಪ್ರತಿ ಸೋಮವಾರ ಪ್ರಸಾರವಾಗುವ ವಿಚಾರ ಸಂಕೀರಣದ ಪ್ರಯೋಜನ ಪಡೆಯಬಹುದು.

☛ ಕೇಂದ್ರದ ವಿಸ್ತರಣಾ ತಜ್ಞರಾದ ಶ್ರೀ ರಘುರಾಜ ಜೆ. ರವರು ದಿನಾಂಕ 25-06-2008 ರಂದು ಪ್ರಸಾರ ಭಾರತಿ ಆಕಾಶವಾಣಿ ಭದ್ರಾವತಿಯವರು ಕೃಷಿ ಮಹಾವಿದ್ಯಾಲಯ, ಶಿವಮೊಗ್ಗದಲ್ಲಿ ಏರ್ಪಡಿಸಿದ್ದ ಗ್ರಾಮೀಣ ಕಾರ್ಯಕ್ರಮ ಸಲಹಾ ಸಮಿತಿ ಸಭೆಯಲ್ಲಿ ಭಾಗವಹಿಸಿರುತ್ತಾರೆ.

## ಆಕಾಶವಾಣಿ, ಭದ್ರಾವತಿಯಲ್ಲೊಂದು ಕಾರ್ಯಕ್ರಮ

✦ ಸೊಳ್ಳೆಕೋಶಭಕ್ಷಕ ಅಲಂಕಾರಿಕ ಮೀನುಗಳು – ಡಾ।। ದೇವರಾಜ ಟಿ.ಎನ್., ಕಾರ್ಯಕ್ರಮ ಸಂಯೋಜಕರು (ಪ್ರಸಾರವಾದ ದಿನಾಂಕ:08-06-2008).

## ಕ್ಷೇತ್ರ ಪ್ರಾತ್ಯಕ್ಷಿಕೆ ಮತ್ತು ಪ್ರಯೋಗಗಳಿಗಾಗಿ ಹಮ್ಮಿಕೊಂಡ ಪ್ರಮುಖ ತರಬೇತಿ ಕಾರ್ಯಕ್ರಮಗಳು

- ತೋಟಗಾರಿಕೆ ಬೆಳೆಗಳಲ್ಲಿ ಕೊಯ್ಲಿನೋತ್ತರ ತಾಂತ್ರಿಕತೆಗಳು.
- ತೋಟಗಾರಿಕೆ ಬೆಳೆಗಳಲ್ಲಿ ಮುಂಗಾರು ಹಂಗಾಮಿನಲ್ಲಿ ಅನುಸರಿಸಬೇಕಾದ ಬೇಸಾಯ ಕ್ರಮಗಳು.
- ಜೀವವೈವಿಧ್ಯ ಸಂರಕ್ಷಣೆ.
- ಮಾಗಿ ಉಳುಮೆ ಮತ್ತು ಮಣ್ಣು ಪರೀಕ್ಷೆಯ ಮಹತ್ವ.
- ತರಕಾರಿ ಬೆಳೆಗಳಲ್ಲಿ ಆಧುನಿಕ ಬೇಸಾಯ ಪದ್ಧತಿಗಳು.
- ಒಳನಾಡು ಕೃಷಿ ಹೊಂಡಗಳಲ್ಲಿ ಸುಸ್ಥಿರ ಮೀನುಕೃಷಿ.
- ದ್ವಿದಳ ಧಾನ್ಯಗಳ ವೈಜ್ಞಾನಿಕ ಸಂರಕ್ಷಣಾ ಕ್ರಮಗಳು.
- ರಾಗಿ (GPU-28), ಮೆಕ್ಕೆಜೋಳ (NAH-2049) ಮತ್ತು ಭತ್ತದಲ್ಲಿ (TANU KMP-101) ಸಮಗ್ರ ಆಧುನಿಕ ಬೇಸಾಯ ಕ್ರಮಗಳು.
- ಬಿಟಿ ಹತ್ತಿ (MRC 6918) ಯಲ್ಲಿ ಸಮಗ್ರ ಬೆಳೆ ನಿರ್ವಹಣೆ.
- ಸೂರ್ಯಕಾಂತಿ (KBSH-53) ಬೆಳೆಯಲ್ಲಿ ಉತ್ಪಾದನಾ ತಾಂತ್ರಿಕತೆಗಳು.
- ಅಡಿಕೆ ಬೆಳೆಯಲ್ಲಿ ಲಘು ಮತ್ತು ಪ್ರಮುಖ ಪೋಷಕಾಂಶಗಳ ನಿರ್ವಹಣೆ.
- ಕಿರುಧಾನ್ಯಗಳಲ್ಲಿ (ರಾಗಿ GPU-28, ನವಣೆ STA-326 ಮತ್ತು ಸಾಮೆ OLM-203) ಆಧುನಿಕ ಬೇಸಾಯ ಪದ್ಧತಿಗಳು ಮತ್ತು ಮೌಲ್ಯವರ್ಧಿತ ಉತ್ಪನ್ನಗಳು.
- ತರಕಾರಿ ಬೆಳೆಗಲ್ಲಿ ಲಘು ಪೋಷಕಾಂಶಗಳ ಕೊರತೆಯ ನಿರ್ವಹಣಾ ಕ್ರಮಗಳು.
- ಈರುಳ್ಳಿ ಬೆಳೆಯಲ್ಲಿ ನೇರಳೆ ಎಲೆಮಚ್ಚೆ ರೋಗ ನಿರೋಧಕ ತಳಿ (ಅರ್ಕಾಕಲ್ಯಾಣ್)ಯ ಪರಿಚಯ.
- ಮೆಣಸಿಕಾಯಿಯಲ್ಲಿ ಒಣ ಬೇಸಾಯಕ್ಕೆ ಸೂಕ್ತವಾದ 'ಸಮೃದ್ಧಿ' ತಳಿಯ ಪರಿಚಯ.







## ಪದ್ಧತಿ ಪ್ರಾತ್ಯಕ್ಷಿಕೆಗಳು



ಹತ್ತಿಯಲ್ಲಿ 4'x4' ಬಿತ್ತನೆ ಮಾದರಿ



ಮೆಣಸಿನಕಾಯಿಯಲ್ಲಿ ಏರು ಸಸಿ ಮಡಿ



ಕಬ್ಬಿನಲ್ಲಿ ಕಾರ್ಬನ್ ಡೈಜಿಮ್‌ನಿಂದ ಬೀಜೋಪಚಾರ

## ವೈಜ್ಞಾನಿಕ ಕ್ಷೇತ್ರ ಭೇಟಿ








## ಮುಂಬರುವ ತ್ರೈಮಾಸಿಕಕ್ಕೆ ಕೃಷಿ ಮುನ್ಸೂಚನೆಗಳು

- ಮುಂಗಾರು ಮಳೆ ಬರುತ್ತಿದೆ. ಕೃಷಿ ಹೊಂಡ, ಬಾವಿ, ಕೆರೆ-ಕಟ್ಟೆಗಳು ನೀರಿನಿಂದ ತುಂಬಲಿವೆ. ಮೀನುಮರಿಗಳನ್ನು ಅವುಗಳಲ್ಲಿ ಬಿಡಲು ಸಕಾಲ. ಹಾಗೆಯೇ ಹೊಂಡದ ಬದುಗಳಲ್ಲಿ ಹಣ್ಣಿನಗಿಡ/ತರಕಾರಿ ಬೀಜಗಳನ್ನು ಬಿತ್ತುವುದು ಜಾಣರ ಲಕ್ಷಣ.
- ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ರೈತಬಾಂಧವರು ಸಿಓ-3 ಮೇವಿನ ಕಡ್ಡಿಗಳನ್ನು ನಾಟಿಮಾಡಲು ಸೂಕ್ತವಾದ ಸಮಯವಾಗಿರುತ್ತದೆ.
- ಹೈನುಗಾರಿಕೆಯಲ್ಲಿ ಅಜೋಲ್ಲಾ ಬೆಳೆಸಿ ರಾಸುಗಳಿಗೆ ದಾಣಿಮಿಶ್ರಣದೊಂದಿಗೆ ನೀಡುವುದರಿಂದ ಹಾಲಿನ ಇಳುವರಿಯನ್ನು ಹೆಚ್ಚಿಸುವುದರ ಜೊತೆಗೆ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಬಹುದಾಗಿದೆ.
- ಮೆಕ್ಕೆಜೋಳ ಹಾಗೂ ಭತ್ತದ ಬೆಳೆಗಳಿಗೆ ಸಾರಜನಕ, ರಂಜಕ ಹಾಗೂ ಪೊಟ್ಯಾಷ್ ಗೊಬ್ಬರಗಳ ಜೊತೆಗೆ ಸತುವಿನ ಸಲ್ಫೇಟ್ ಗೊಬ್ಬರವು ಅತ್ಯಂತ ಅವಶ್ಯಕವಾಗಿರುತ್ತದೆ. ರೈತರು ಸತುವಿನ ಸಲ್ಫೇಟ್‌ನ್ನು (ಎಕರೆಗೆ 4 ಕೆ.ಜಿ.) ಬಳಸುವುದರಿಂದ ಅಧಿಕ ಇಳುವರಿಯನ್ನು ಪಡೆಯಬಹುದು.
- ಮೆಕ್ಕೆಜೋಳದಲ್ಲಿ ಕಳೆ ತೆಗೆದು, ಶಿಫಾರಸ್ಸು ಮಾಡಿದ 50% ಯೂರಿಯಾವನ್ನು ಮೇಲುಗೊಬ್ಬರವಾಗಿ ಕೊಡಬೇಕು.
- ಭತ್ತದ ಸಸಿಮಡಿಯಲ್ಲಿ ನೀರು ನಿರ್ವಹಣೆಯನ್ನು ಮಾಡಬೇಕು.
- ತನು ತಳಿಯ ಭತ್ತವನ್ನು ನಾಟಿ ಮಾಡಲು ಸೂಕ್ತವಾದ ಕಾಲ.
- ಭತ್ತದಲ್ಲಿ ದುಂಡಾಣು ಅಂಗಮಾರಿ ರೋಗ ನಿರ್ವಹಣೆಗೆ ಸ್ಟ್ರೆಪ್ಟೋಸೈಕ್ಲಿನ್ (1ಗ್ರಾಂ/1ಕೆಜಿ ಬೀಜಕ್ಕೆ) ನಿಂದ ಬೀಜೋಪಚಾರ ಮಾಡಬೇಕು.
- ಹತ್ತಿಯಲ್ಲಿ ಮೋಹಕ ಬಲೆ ಅಳವಡಿಸಬೇಕು (ಎಕರೆಗೆ 2ರಂತೆ).

**ಮೆಕ್ಕೆಜೋಳದಲ್ಲಿ ಕೇದಿಗೆ ರೋಗ ಮತ್ತು ಕಾಂಡಕೊರಕದ ನಿರ್ವಹಣೆ :-**

**ಕೇದಿಗೆ ರೋಗ**

**ಲಕ್ಷಣ** : ಬಿಳಿ ಶಿಲೀಂದ್ರ ರೂಪದಲ್ಲಿ ಎಲೆಯ ತಳಭಾಗದಲ್ಲಿ ಕಂಡು ಸಸಿಗಳು ಹಳದಿ ಬಣ್ಣಕ್ಕೆ ತಿರುಗತ್ತವೆ.

**ಹತೋಟಿಕ್ರಮಗಳು** : ಮೆಕ್ಕೆಜೋಳದಲ್ಲಿ ಕೇದಿಗೆ ರೋಗ ನಿರ್ವಹಣೆಗೆ ರಿಡೋಮಿಲ್ MZ (2 ಗ್ರಾಂ ಪ್ರತಿ ಲೀ. ನೀರಿಗೆ ಬೆರೆಸಿ ಸಿಂಪಡಿಸಬೇಕು.

**ಕಾಂಡಕೊರಕ [redacted]**

**ಲಕ್ಷಣ** : ಕಾಂಡಕೊರಕದ ಮರಿಹುಳುಗಳು ದಂಟಿನ ಬುಡಭಾಗದಲ್ಲಿ ಸಣ್ಣ ರಂದ್ರ ಕೊರೆಯುತ್ತವೆ ನಂತರ ಬುಡಭಾಗ ಕೊಳೆತು ಎಲೆಗಳು ಬಾಡುತ್ತವೆ.

**ಹತೋಟಿಕ್ರಮಗಳು** : ಎಂಡೋಸಲ್ಫಾನ್ 35ಇಸಿ (2 ಮಿಲಿ ಪ್ರತಿ ಲೀ. ನೀರಿಗೆ) ಅಥವಾ ಕಾರ್ಬರಿಲ್ 4G (6 ಕೆ.ಜಿ. ಪ್ರತಿ ಎಕರೆಗೆ) ಅಥವಾ ಎಂಡೋಸಲ್ಫಾನ್ 4G (6 ಕೆ.ಜಿ. ಪ್ರತಿ ಎಕರೆಗೆ) ಸುಳಿಯ ಭಾಗಕ್ಕೆ ಸಿಂಪಡಿಸಬೇಕು.

**ಅಡಿಕೆಯಲ್ಲಿ ಹಿಡಿಮುಂಡಿಗೆ ರೋಗ ನಿರ್ವಹಣೆ :-**

**ಲಕ್ಷಣ** : ರೋಗ ತಗುಲಿದ ಗಿಡಗಳು ಸುಳಿಯಲ್ಲಿ ನೇರವಾಗಿ ಸಣ್ಣ ಎಲೆಗಳಿಂದ ಕೂಡಿರುತ್ತದೆ. ನಂತರ ಸೋಗೆಗಳು ಸಣ್ಣದಾಗಿ ಸುಕ್ಕುಗಟ್ಟಿ ಒರಟಾಗುತ್ತದೆ. ಗಣ್ಣುಗಳ ಅಂತರ ಕಡಿಮೆಯಾಗಿ ಕಾಯಿಗಳ ಉತ್ಪಾದನೆ ಕಡಿಮೆಯಾಗುತ್ತದೆ.

**ಹತೋಟಿಕ್ರಮಗಳು** : ಬಸಿಗಾಲುವೆಗಳನ್ನು ನಿರ್ಮಿಸಬೇಕು. ಮರದ ಬುಡದಲ್ಲಿ ಗಡುಸು ಮಣ್ಣಿನ ಪದರವನ್ನು ಸಡಿಲಗೊಳಿಸಬೇಕು. ಮೈಲುತುತ್ತ (100ಗ್ರಾಂ) ಮತ್ತು ಸುಣ್ಣ (100ಗ್ರಾಂ) ವನ್ನು ಪ್ರತಿ ಮರದ ಬುಡದಲ್ಲಿ ಬೆರೆಸಬೇಕು. ಬೋರಾಕ್ಸ್ 25 ಗ್ರಾಂ ಪ್ರತಿ ಮರಕ್ಕೆ ಕೊಡಬೇಕು.

## ಮುಂಬರುವ ತ್ರೈಮಾಸಿಕದಲ್ಲಿ ಹಮ್ಮಿಕೊಳ್ಳಲಾಗುವ ಕಾರ್ಯಕ್ರಮಗಳು

- ಗ್ರಾಮಗಳಲ್ಲಿ ರೈತರ ಸಮಸ್ಯೆಗಳಿಗೆ ಸಮಗ್ರ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕೃಷಿ ಶಿಬಿರವನ್ನು ಚನ್ನಗಿರಿ ತಾಲ್ಲೂಕಿನ ಬಸವಾಪಟ್ಟಣ ಮತ್ತು ತಾವರಕೆರೆ ಗ್ರಾಮಗಳಲ್ಲಿ ಜುಲೈ ತಿಂಗಳಲ್ಲಿಶಿಬಿರವನ್ನು ಏರ್ಪಡಿಸಲಾಗುವುದು.
- ತೊಗರಿಯಲ್ಲಿ ಕಾಯಿ ಕೊರಕದ ಸಮಗ್ರ ಪೀಡೆ ಮತ್ತು ಪೋಷಕಾಂಶಗಳ ನಿರ್ವಹಣಾ ಕ್ರಮಗಳು
- ಸೂರ್ಯಕಾಂತಿಯಲ್ಲಿ ತುದಿ ಸಾಯುವ ನಂಜಾಣು ರೋಗದ ನಿರ್ವಹಣಾ ಕ್ರಮಗಳು.
- ಸೂರ್ಯಕಾಂತಿ ಬೆಳೆಯಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣಾ ಕ್ರಮಗಳು.
- ಕೃಷಿ ಹೊಂಡ ಮತ್ತು ಶೇಖರಣಾ ಕೊಳಗಳಲ್ಲಿ ಸಮಗ್ರ ಸುಸ್ಥಿರ ಮೀನು ಕೃಷಿ.
- ಅಡಿಕೆಯಲ್ಲಿ ಪೋಷಕಾಂಶಗಳ ನಿರ್ವಹಣೆ.
- ಹಣ್ಣು ಮತ್ತು ತರಕಾರಿಗಳಲ್ಲಿ ಸಂಸ್ಕರಣೆ ಮತ್ತು ಸಂರಕ್ಷಣೆ.
- ಈರುಳ್ಳಿಯಲ್ಲಿ "ಅರ್ಕಾ ಕಲ್ಯಾಣ್" ತಳಿಯ ಬೇಸಾಯ ಕ್ರಮಗಳು.
- ಮೆಣಸಿನಕಾಯಿಯಲ್ಲಿ "ಸಮೃದ್ಧಿ" ತಳಿಯ ಬೇಸಾಯ ಕ್ರಮಗಳು.
- ತೆಂಗಿನಲ್ಲಿ ನುಸಿಪೀಡೆ ಮತ್ತು ಕಪ್ಪುತಲೆ ಕಂಬಳಿ ಹುಳದ ನಿರ್ವಹಣಾ ಕ್ರಮಗಳು.
- ಹೈನುರಾಸುಗಳಿಗೆ "ಸಮತೋಲನ ಆಹಾರ ಪೂರೈಕೆ ವಿಧಾನಗಳು".

ಸಂಪಾದಕರು ಮತ್ತು ಪ್ರಕಾಶಕರು : **ಡಾ|| ದೇವರಾಜ ಟಿ.ಎನ್.**, ಕಾರ್ಯಕ್ರಮ ಸಂಯೋಜಕರು, ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ-577 002., ಕರ್ನಾಟಕ ರಾಜ್ಯ.
ಫೋನ್ ನಂ.: 08192-294568. ಮಿಂಚಂಚೆ : tkvk@taralabalu.org.
ಸಂಗ್ರಹಣೆ ಮತ್ತು ಸಹ ಸಂಪಾದಕರು : **ಶ್ರೀ ಮಲ್ಲಿಕಾರ್ಜುನ ಬಿ.ಓ., ಶ್ರೀ ಬಸವನಗೌಡ ಎಂ.ಜಿ., ಡಾ|| ಜಯದೇವಪ್ಪ ಜಿ.ಕೆ., ಕುಮಾರಿ ಕವಿತ ಪಿ., ಶ್ರೀ ರಘುರಾಜ ಜೆ., ಶ್ರೀ ಪ್ರಸನ್ನ ಕುಮಾರ ಎನ್.**
**ಶ್ರೀ ವಿಜಯ ಕುಮಾರ ಎಸ್.ಬಿ.** ಮತ್ತು **ಡಾ|| ಪ್ರದೀಪ್ ಹೆಚ್.ಎಂ.**